**Online Newspaper Clipping Service**

ಸಂಯುಕ್ತ ಕರ್ನಾಟಕ

Dtd- Sunday, 03nrd August 2025

Page No. 02

# ಜಾಲಪ್ಪ ಆಸ್ಪತ್ರೆಯಲ್ಲಿ ಹೊಸ ಕ್ಲಿನಿಕಲ್ ಸೇವೆಗೆ ಚಾಲನೆ



**ಸಂ.ಕ ಸಮಾಚಾರ, ಕೋಲಾರ**

ನಗರದ ಆರ್.ಎಲ್. ಜಾಲಪ್ಪ ಆಸ್ಪತ್ರೆಯಲ್ಲಿ ಹೊಸ ಕ್ಲಿನಿಕಲ್ ಸೇವೆಗಳನ್ನು ಶುಕ್ರವಾರ ಅರಸು ವೈದ್ಯಕೀಯ ಕಾಲೇಜು ಅಧ್ಯಕ್ಷ ಜಿ.ಹೆಚ್.ನಾಗರಾಜ್ ಉದ್ಘಾಟಿಸಿದರು.

ವಯಸ್ಕರ ಲಸಿಕಾ ಕೇಂದ್ರ, ಡರ್ಮಟಾಲಜಿ ಪಿಆರ್‌ಪಿ ಲೇಜರ್ ಘಟಕ, ಹಿಸ್ಟೋಪಾಥಾಲಜಿ ಆಟೋ ಸ್ಟೇನರ್ ಮತ್ತು ಗ್ರಿಸಿಂಗ್ ಸ್ಟೇಷನ್, ರಕ್ತ ಬ್ಯಾಂಕ್ (ಐಎಚ್‌ಬಿಟಿ), ಬಂಜೆತನ ಚಿಕಿತ್ಸಾ ಕೇಂದ್ರ, ಕ್ಲಿನಿಕಲ್ ಟ್ರೈಲ್ಸ್ ಘಟಕಗಳನ್ನು "ಜಾಲಪ್ಪ ಫೌಂಡೇಶನ್ ಫಾರ್ ಇನೋವೇಶನ್ ಅಂಡ್ ಇಂಕ್ಯುಬೇಶನ್ ಹಾಗೂ ಎಸ್‌ಡಿಯುಇಟಿ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಸಹಭಾಗಿತ್ವದಲ್ಲಿ ರೂಪಿಸಲಾಗಿದೆ.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಜೆ.ರಾಜೇಂದ್ರ, ಆಡಳಿತ ಮಂಡಳಿ ಸದಸ್ಯ ಕೆ.ಜಿ.ಹನುಮಂತರಾಜು, ಉಪಕುಲಪತಿ ಡಾ. ಬಿ.ವೆಂಗಮ್ಮ, ಆಡಳಿತಾಧಿಕಾರಿ ಡಾ. ಡಿ.ವಿ.ಎಲ್. ಎನ್.ಪ್ರಸಾದ್, ಕುಲಸಚಿವ ಡಾ. ಸಿ.ಮುನಿನಾರಾಯಣ, ಪ್ರಾಂಶುಪಾಲ ಡಾ. ಕೆ.ಪ್ರಕಾಶ್, ವೈದ್ಯಕೀಯ ಅಧೀಕ್ಷಕ ಡಾ. ಜೆ.ಕೃಷ್ಣಪ್ಪ, ಉಪ ಅಧೀಕ್ಷಕ ಡಾ.ದಿನೇಶ್ ಕಾರ್ತೀಕ್, ಸಂಶೋಧನಾ ವಿಭಾಗದ ನಿರ್ದೇಶಕಿ ಡಾ. ಆರ್.ಕಲ್ಯಾಣಿ, ಸಂಯೋಜಕಿ ಡಾ. ಕೆ.ಭುವನಾ, ಐಐಸಿ ಸಂಯೋಜಕಿ ಡಾ. ಎನ್. ಎಸ್.ಅಶ್ವಿನಿ, ಇದ್ದರು.

ಈ ಹೊಸ ಸೌಲಭ್ಯಗಳು ಆರೋಗ್ಯ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮಹತ್ವಪೂರ್ಣ ಪಾತ್ರ ವಹಿಸಲಿದೆ, ಸಾರ್ವಜನಿಕರು ಈ ಸೇವೆಗಳನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳಬೇಕೆಂದು ನಾಗರಾಜ್ ಮನವಿ ಮಾಡಿದರು.

ಪ್ರಜಾವಾಣಿ



# ಜಾಲಪ್ಪ ಆಸ್ಪತ್ರೆ; ಹೊಸ ಕ್ಲಿನಿಕಲ್ ಸೇವೆ

ಪ್ರಜಾವಾಣಿ ವಾರ್ತೆ

ಕೋಲಾರ: ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಮತ್ತು ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ ಹೊಸ ಕ್ಲಿನಿಕಲ್ ಸೇವೆಗಳ ಉದ್ಘಾಟನೆಯನ್ನು ಅಧ್ಯಕ್ಷ ಹಾಗೂ ಕುಲಾಧಿಪತಿ ಜಿ.ಎಚ್.ನಾಗರಾಜ ನೆರವೇರಿಸಿದರು.

ವಯಸ್ಕರ ಲಸಿಕಾ ಕೇಂದ್ರ, ಡೆರ್ಮಟಾಲಜಿ ಪಿಆರ್‌ಪಿ ಲೇಸರ್ ಘಟಕ, ಹಿಸ್ಟೋಪೆಥಾಲಜಿ ಆಟೋಸ್ಟೈನರ್ ಅಂಡ್ ಗ್ರೋಸಿಂಗ್ ಸ್ಟೇಷನ್, ರಕ್ತ ಬ್ಯಾಂಕ್, ಬಂಜೆತನ ಚಿಕಿತ್ಸೆ ಕೇಂದ್ರ ಹಾಗೂ ಕ್ಲಿನಿಕಲ್ ಟ್ರಯಲ್ ಕೇಂದ್ರಕ್ಕೆ ಚಾಲನೆ ನೀಡಿದರು.

ಜಾಲಪ್ಪ ಫೌಂಡೇಷನ್ ಫಾರ್ ಇನೋವೇಷನ್ ಅಂಡ್ ಇಂಕ್ಯುಬೇಷನ್ ಅನ್ನು ಟ್ರಸ್ಟಿ ರಾಜೇಶ್ ಎನ್.ಜಗದಾಳೆ ಉದ್ಘಾಟಿಸಿದರು.

ಉಪಾಧ್ಯಕ್ಷ ಜೆ.ರಾಜೇಂದ್ರ, ಕಾರ್ಯದರ್ಶಿ ಕೆ.ಜಿ.ಹನುಮಂತರಾಜು, ಕುಲಪತಿ ಡಾ.ಬಿ.ವೆಂಗಮ್ಮ, ಮುಖ್ಯ ಆಡಳಿತಾಧಿಕಾರಿ ಡಾ.ಡಿವಿಎಲ್‌ಎನ್ ಪ್ರಸಾದ್, ಕುಲಸಚಿವ ಡಾ.ಮುನಿನಾರಾಯಣ, ಪ್ರಾಂಶುಪಾಲ ಡಾ.ಕೆ. ಪ್ರಭಾಕರ್, ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಜೆ.ಕೃಷ್ಣಪ್ಪ, ಡಾ.ಕಲ್ಯಾಣಿ, ಡಾ.ಭುವನಾ, ಡಾ.ಅಶ್ವಿನಿ ಇದ್ದರು.



ಕೋಲಾರದ ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ ವಿವಿಧ ಸೌಲಭ್ಯವನ್ನು ಅಧ್ಯಕ್ಷ ಹಾಗೂ ಕುಲಾಧಿಪತಿ ಜಿ.ಎಚ್.ನಾಗರಾಜ ಉದ್ಘಾಟಿಸಿದರು